# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಮೈಸೂರು

## ಎಸ್.ಸಿ. / 257/2021

| | | |
|---|---|---|
| **ಫಿರ್ಯಾದುದಾರರು :** | | ಕರ್ನಾಟಕ ರಾಜ್ಯ ಸರ್ಕಾರ<br>ಆರಕ್ಷಕ ನಿರೀಕ್ಷಕರು,<br>ಕೃಷ್ಣರಾಜ ಪೊಲೀಸ್ ಠಾಣೆ<br>ಮೈಸೂರು. |

– ವಿರುದ್ಧ –

| | | |
|---|---|---|
| **ಆರೋಪಿತರುಃ** | 1. | ಶ್ರೀ ಅಂಬರೀಶ್<br>ಬಿನ್ ಲೇಟ್ ನಾಗರಾಜ,<br>35 ವರ್ಷ,<br>ವಾಸಃ ಸರ್ಕಾರಿ ಶಾಲೆ,<br>ಗಣಪತಿ ದೇವಸ್ಥಾನ ಕನಕಗಿರಿ,<br>ವಿದ್ಯಾರಣ್ಯಪುರಂ,<br>ಮೈಸೂರು ಸಿಟಿ. |
| | 2. | ಶ್ರೀ ಸುರೇಶ್ ಸ್ವಾಮಿ,<br>@ ಸ್ವಾಮಿ @ ಬೊಗಳೆ,<br>ಬಿನ್ ಜವರಯ್ಯ,<br>36 ವರ್ಷ,<br>ವಾಸಃ ನಂ.15 ಡಿ, ಎಂ.ಜಿ. ರಸ್ತೆ,<br>ಮಧುವನ ಲೇಔಟ್,<br>ಮೈಸೂರು ಸಿಟಿ. |

## ಹೆಚ್ಚುವರಿ ದಂ. ಪ್ರ.ಸಂ. ಕಲಂ 313 ರಡಿ ಆರೋಪಿತರ ಹೇಳಿಕೆ

1) ಅಭಿಯೋಜನೆ ಪರವಾಗಿ ಈ ಕೇಸಿನಲ್ಲಿ ನುಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?

ಉತ್ತರ – ಆ )

2) ಫ್ರಾಸಾ–1 ನವೀನ್ ಕುಮಾರ್.ಎಂ.ಆರ್ ತನ್ನ ಸಾಕ್ಷಿ ವಿಚಾರಣೆಯಲ್ಲಿ ದಿಃ*02.10.2020* ರಂದು ತನ್ನ ಹುಟ್ಟುಹಬ್ಬ ಇದ್ದು ಆ ದಿನ ತಾನು ತನ್ನ ಸ್ನೇಹಿತರಿಗೆ ಸಿಕ್ಕಿಲ್ಲವಾದ್ದರಿಂದ ದಿಃ*04.10.2020* ರಂದು ರಾತ್ರಿ *10.30–11* ಗಂಟೆ ವೇಳೆಯಲ್ಲಿ ತನ್ನ ಸ್ನೇಹಿತರಾದ ಪವನ್ ಮತ್ತು ರಮೇಶ್ ಇವರು ತಮ್ಮ ಮನೆಗೆ ಬಂದಿದ್ದರು. ಆ ಕಾಲಕ್ಕೆ ರಾತ್ರಿ ಮಾತನಾಡುತ್ತಾ ಕುಳಿತು ಟೀ ಕುಡಿಯಲು ತನ್ನ ಸ್ನೇಹಿತರಾದ ರಮೇಶ ಇವರ ಕಾರಿನಲ್ಲಿ ಜೆ.ಎಸ್.ಎಸ್ ಆಸ್ಪತ್ರೆ ಬಳಿ ಇರುವ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು ವಾಪಸ್ಸು ಬರುತ್ತಿರುವಾಗ ರಾತ್ರಿ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ *1* ನೇ ಆರೋಪಿತ ಅಂಬರೀಶ್ ಇವರು ಕಾರಿಗೆ ಕೈ ಅಡ್ಡ ಹಾಕಿದ್ದರು. ಆಗ ನಾವು ಏನೋ ಆಸ್ಪತ್ರೆ ಬಳಿ ಎಂದು ಕಾರನ್ನು ನಿಲ್ಲಿಸಿದಾಗ ನನ್ನ ಸ್ನೇಹಿತ ರಮೇಶನಿಗೆ *1* ನೇ ಆರೋಪಿ ಅಂಬರೀಶ ಕೈಯಿಂದ ಹೊಡೆದಿದ್ದ ಆಗ ನಾನು ಮತ್ತು ಪವನ್ ಕಾರಿನಿಂದ ಕೆಳಗೆ ಇಳಿದು ಯಾಕೆ ಆ ರೀತಿ ಹೊಡೆಯುತ್ತೀಯಾ ಎಂದು *1* ನೇ ಆರೋಪಿತನನ್ನು ಕೇಳಿದಾಗ *1* ಮತ್ತು *2* ನೇ ಆರೋಪಿತ ಸೇರಿ ನಮಗೆ ಹೊಡೆದಿದ್ದರು. ಆ ಕಾಲಕ್ಕೆ *1* ನೇ ಆರೋಪಿತನು ರೇಜರ್ ನಿಂದ ತನ್ನ ಮುಖ, ಕಣ್ಣು, ಬಾಯಿ ಮತ್ತು ಕತ್ತಿಗೆ ಹೊಡೆದಿದ್ದ. ಆ ಘಟನೆ ಬಳಿಕ ತಾನು ಸೀತಾರಂಗ ಆಸ್ಪತ್ರೆಗೆ ಹೋಗಿದ್ದೆ ಆದರೆ ಅಲ್ಲಿ ವೈದ್ಯರು ಇರಲಿಲ್ಲವಾದ್ದರಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿದ್ದೆ. ಆಗ ಅವರು ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಹೇಳಿದ್ದರು ಆಗ ತಾನು ಮನೆಯವರಿಗೆಲ್ಲಾ ತಿಳಿಸಿ ಮರುದಿನ ಬೆಳಗ್ಗೆ ಭಾನವಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

3) ಫ್ರಾಸಾ–1 ನವೀನ್ ಕುಮಾರ್.ಎಂ.ಆರ್ ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಆ ಘಟನೆ ಕಾಲಕ್ಕೆ ರಮೇಶನಿಗೆ ಬಾಯಿಯ ಬಲಭಾಗಕ್ಕೆ ಗಾಯವಾಗಿತ್ತು. ಪವನ್ ಎನ್ನುವವರಿಗೆ ಕೈ ಬೆರಳಿಗೆ ಗಾಯವಾಗಿತ್ತು. ನಂತರ ದಿಃ*05.10.2020* ರಂದು ಪೋಲೀಸ್ ಠಾಣೆಗೆ ಹೋಗಿ ದೂರು

ಕೊಟ್ಟಿದ್ದೆ. ಸಾಕ್ಷಿದಾರರು ದೂರು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–*1* ಮತ್ತು ನಿಪಿ–*1(ಎ)* ಎಂದು ಗುರುತಿಸಲಾಯಿತು. ದೂರು ಕೊಟ್ಟ ಮರುದಿನ ಪೋಲೀಸರು ಘಟನೆ ಸ್ಥಳದಲ್ಲಿ ಮಹಜರ್ ಮಾಡಿದ್ದರು. ಮಧ್ಯಾಹ್ನ *12.30* ರಿಂದ *1.00* ಗಂಟೆ ಸಮಯದಲ್ಲಿ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಘಟನೆ ವೇಳೆಯಲ್ಲಿ ತಾನು ಧರಿಸಿದ್ದ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿದ್ದರು. ಮಹಜರ್ ಕಾಲಕ್ಕೆ ಘಟನೆ ವೇಳೆಯಲ್ಲಿ ಬಿದ್ದಿದ್ದ ರಕ್ತವನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು. ಸಾಕ್ಷಿದಾರರು ಮಹಜರ್ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ–*2* ಮತ್ತು ನಿ.ಪಿ–*2(ಎ)* ಎಂದು ಗುರುತಿಸಲಾಗಿದೆ. ಘಟನೆ ಕಾಲಕ್ಕೆ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ನೋಡಿದರೆ ಗುರುತಿಸುತ್ತೇನೆ. ನಂತರ ಪೋಲೀಸ್ ಠಾಣೆಗೆ ತನ್ನನ್ನು ಪುನಃ ಕರೆಸಿ ಘಟನೆ ಬಗ್ಗೆ ಸಂಪೂರ್ಣ ವಿವರಣೆ ಪಡೆದಿದ್ದರು. ಆ ಕಾಲಕ್ಕೆ *1* ನೇ ಆರೋಪಿತನನ್ನು ತನಗೆ ತೋರಿಸಿರಲಿಲ್ಲ. ರೇಜರ್, ರಕ್ತ ಹತ್ತಿದ ಡಾಂಬರ್, ರಕ್ತ ಹತ್ತದೇ ಇದ್ದ ಡಾಂಬರ್ ಮತ್ತು ಟಿ.ಶರ್ಟ್ ಆ ಮಹಜರ್ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ವಸ್ತುಗಳು ಇರುತ್ತವೆ. ಸದರಿ ವಸ್ತುಗಳನ್ನು ಎಂ.ಒ *1* ರಿಂದ *4* ಎಂದು ಗುರುತಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

4) ಪ್ರಾಸಾ–2 ಪವನ್ ಕುಮಾರ್ ತನ್ನ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರನ್ನು ಈ ಮೊದಲು ಕೆಲವೊಮ್ಮೆ ನೋಡಿದ್ದೇನೆ ಮತ್ತು ಅಲ್ಪ ಸ್ವಲ್ಪ ಅವರ ಪರಿಚಯ ಇದೆ. ಚಾ.ಸಾ–1, 3 ಮತ್ತು ತಾನು ಸ್ನೇಹಿತರಿರುತ್ತೇವೆ. ದಿಃ*04.10.2020* ರಂದು ತಾನು ಮತ್ತು ಚಾ.ಸಾ–*3* ರಮೇಶ ರಾತ್ರಿ *8.30–9.00* ಗಂಟೆ ವೇಳೆಯಲ್ಲಿ ಚಾಸಾ–*1* ರವರ ಮನಗೆ ಹೋಗಿದ್ದೆವು. ಆ ದಿನ ರಾತ್ರಿ *11.45–12.00* ಗಂಟೆ ವೇಳೆಯಲ್ಲಿ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು *12.30* ರ ಸಮಯದಲ್ಲಿ ವಾಪಸ್ಸು ಬರುತ್ತಿರುವಾಗ ಜೆ.ಎಸ್.ಎಸ್ ಆಸ್ಪತ್ರೆ

ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ *1* ನೇ ಆರೋಪಿತ ಅಂಬರೀಶ್ ಇವರು ಕಾರಿಗೆ ಕೈ ಅಡ್ಡ ಹಾಕಿದ್ದರು. ಆಗ ನಾವು ಏನೋ ಆಸ್ಪತ್ರೆ ತುರ್ತು ಕಾರ್ಯ ಇರಬಹುದು ಎಂದು ಕಾರನ್ನು ನಿಲ್ಲಿಸಿದಾಗ ತನ್ನ ಸ್ನೇಹಿತ ರಮೇಶನಿಗೆ *1* ನೇ ಆರೋಪಿತ ಗಾಡಿ ಏಕೆ ನಿಲ್ಲಿಸಿದೆ ಎಂದು ಅಂಬರೀಶ ಕೈಯಿಂದ ಹೊಡೆದಿದ್ದ ಆಗ ತಾನು ಮತ್ತು ನವೀನ್ ಕಾರಿನಿಂದ ಕೆಳಗೆ ಇಳಿದು ಯಾಕೆ ಆ ರೀತಿ ಹೊಡೆಯುತ್ತೀಯಾ ಎಂದು *1* ನೇ ಆರೋಪಿತನನ್ನು ಕೇಳಿದಾಗ *1* ಮತ್ತು *2* ನೇ ಆರೋಪಿತರು ನವೀನ್ ನನ್ನು ಸಹ ಹೊಡೆದಿದ್ದರು. ಆ ಕಾಲಕ್ಕೆ *1* ನೇ ಆರೋಪಿತನು ರೇಜರ್ ನಿಂದ ನವೀನ್ ನ ಮುಖ ಮತ್ತು ಕೈಗೆ ಹೊಡೆದಿದ್ದ. ಆ ಕಾಲಕ್ಕೆ ಜಗಳ ಬಿಡಿಸುವಾಗ ತನ್ನ ಕೈಗೆ ಏಟಾಗಿತ್ತು. ಆ ಸ್ಥಳದಲ್ಲಿದ್ದ ಆಟೋ ಚಾಲಕರು ಜಗಳ ಬಿಡಿಸಿದ್ದರು. ಆ ಘಟನೆ ಬಳಿಕ ನವೀನ್ ನನ್ನು ಸೀತಾರಂಗ *(ವಾತ್ಸಲ್ಯ)* ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಅಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇವು. ನಂತರ ಮರುದಿನ ಬೆಳಗ್ಗೆ ಭಾನವಿ ಆಸ್ಪತ್ರೆಗೆ ನವೀನ್ ಕುಮಾರ್ ಇವರನ್ನು ಸೇರಿಸಿದ್ದೆವು. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಎಂ.ಒ *1* ಎಂದು ಗುರುತಿಸಿರುವ ರೇಜರ್ ಆ ಘಟನೆ ಕಾಲಕ್ಕೆ *1* ನೇ ಆರೋಪಿತ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

5) ಫ್ರಾಸಾ–**3** ರಮೇಶ ತನ್ನ ಸಾಕ್ಷಿ ವಿಚಾರಣೆಯಲ್ಲಿ ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಅವರನ್ನು ಗಲಾಟೆ ದಿನ ಮತ್ತು ಪೋಲೀಸ್ ಠಾಣೆಯಲ್ಲಿ ನೋಡಿದ್ದೇನೆ. ಚಾ.ಸಾ–1, 2 ಮತ್ತು ತಾನು ಸ್ನೇಹಿತರಿರುತ್ತೇವೆ. ದಿಃ02.10.2020 ರಂದು ಚಾ.ಸಾ–1 ರವರ ಬರ್ತ್ ಡೇ ಇದ್ದು ಆ ದಿನ ಅವರು ಸಿಕ್ಕಿಲ್ಲವಾದ್ದರಿಂದ ದಿಃ*04.10.2020* ರಂದು ತಾನು ಮತ್ತು ಚಾ.ಸಾ*–2, 8.30–9* ಗಂಟೆ ವೇಳೆಯಲ್ಲಿ ಚಾಸಾ*–1* ರವರ ಮನಗೆ ಹೋಗಿದ್ದೆವು. ಆ ದಿನ ರಾತ್ರಿ

*12.00* ಗಂಟೆ ವೇಳೆಯಲ್ಲಿ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು *12.30* ರ ಸಮಯದಲ್ಲಿ ವಾಪಸ್ಸು ಬರುತ್ತಿರುವಾಗ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ ಕೋರ್ಟ್ ಮುಂದೆ ಇರುವ ಆರೋಪಿತರು ಮತ್ತು ಇನ್ನಿಬ್ಬರು ವ್ಯಕ್ತಿಗಳು ಕಾರಿಗೆ ಕೈ ಅಡ್ಡ ಹಾಕಿದ್ದರು. ಆ ಕಾಲಕ್ಕೆ ತಾನೇ ಕಾರನ್ನು ಓಡಿಸುತ್ತಿದ್ದೆ. ಆಗ ನಾವು ಏನು ಎಂದು ವಿಚಾರಿಸಲು ಕಾರನ್ನು ನಿಲ್ಲಿಸಿದಾಗ ಇಬ್ಬರು ಆರೋಪಿತರು ತನಗೆ ಹೊಡೆದಿದ್ದರು. ಆಗ ಪವನ್ ಮತ್ತು ನವೀನ್ ಇವರು ಕಾರಿನಿಂದ ಇಳಿದು ಯಾಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದಾಗ *1* ನೇ ಆರೋಪಿತ ರೇಜರ್ ನಿಂದ ನವೀನ್ ಕುಮಾರ್ ಗೆ ಹೊಡೆದಿದ್ದ ಆಗ ತಾನು ಬಿಡಿಸಲು ಹೋದಾಗ ತನಗೆ ಕೈ ಬೆರಳು ಮತ್ತು ಬಾಯಿ ಹತ್ತಿರ ಏಟಾಗಿತ್ತು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ತನಗೆ ಹೆಚ್ಚಿನ ಗಾಯಗಳು ಆಗಿಲ್ಲವಾದ್ದರಿಂದ ಸಿದ್ದಾರ್ಥನಗರದಲ್ಲಿ ಇರುವ ಶೋಭಾ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದಿದ್ದೆ. ಎಂ.ಒ *1* ಎಂದು ಗುರುತಿಸಿರುವ ರೇಜರ್ ಆ ಘಟನೆ ಕಾಲಕ್ಕೆ *1* ನೇ ಆರೋಪಿತ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

6) ಫ್ರಾಸಾ–13 ಡಾ. ಲಕ್ಷಿತ್ ಬಿಡ್ಡಪ್ಪ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ತಾನು ಭಾನವಿ ಆಸ್ಪತ್ರೆಯಲ್ಲಿ ಕಳೆದ *9* ವರ್ಷದಿಂದ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ. ದಿಃ*05.10.2020* ರಂದು ಮದ್ಯಾಹ್ನ *3.45* ಕ್ಕೆ ನವೀನ್ ಕುಮಾರ್.ಎಂ.ಆರ್ ಬಿನ್ ಎಂ.ಎಸ್.ರಾಜ್ ಕುಮಾರ್ ರವರನ್ನು ಹೊಡೆದಾಟದ ಹಿನ್ನೆಲೆಯಲ್ಲಿ ಆದಂತ ಗಾಯಗಳಿಗೆ ಚಿಕಿತ್ಸೆ ನೀಡಿದ್ದೆ ಅವರಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

*1.* ಕೆಳ ತುಟಿ ಮತ್ತು ಗಲ್ಲದ ಮಧ್ಯದಲ್ಲಿ *10* ಸೆಮೀ ಅಳತೆಯ ಹರಿದ ಗಾಯ ಇತ್ತು.

*2.* ಮೂಗಿನ ಎಡ ಬದಿಯಲ್ಲಿ *2* ಸೆಮೀ ಅಳತೆಯ ಹರಿದ ಗಾಯ ಇತ್ತು.

*3.* ಎಡ ಕಣ್ಣಿನ ಕೆಳಭಾಗದಲ್ಲಿ *2* ಸೆಮೀ ಅಳತೆಯ ಹರಿದ ಗಾಯ ಇತ್ತು, ಚರ್ಮ ನಷ್ಟವಾಗಿತ್ತು.

*4.* ಹಣೆಯ ಎಡ ಭಾಗದಲ್ಲಿ *3* ಸೆಮೀ ಅಳತೆಯ ಹರಿದ ಗಾಯ ಇತ್ತು.

*5.* ಎಡ ಕಣ್ಣಿನ ರೆಪ್ಪೆಯ ಮೇಲ್ಬಾಗದಲ್ಲಿ *1* ಸೆಮೀ ಅಳತೆಯ ಹರಿದ ಗಾಯ ಇತ್ತು.

ಈ ಮೇಲೆ ಹೇಳಿದ ಎಲ್ಲಾ ಗಾಯಗಳು clean cuts without contamination, ಈ ಮೇಲೆ ಹೇಳಿದ ಎಲ್ಲಾ ಗಾಯಗಳು ತೀವ್ರ ಸ್ವರೂಪದ ಗಾಯಗಳು ಇದ್ದವು. ಸಾಕ್ಷಿದಾರರು ಗಾಯದ ಪ್ರಮಾಣಪತ್ರ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–*11* ಮತ್ತು ನಿಪಿ–*11(*ಎ*)* ಎಂದು ಗುರುತಿಸಲಾಯಿತು. ನಂತರದಲ್ಲಿ ತನಿಖಾಧಿಕಾರಿಯವರು ಒಂದು ರೇಜರ್ ಅನ್ನು ಹಾಜರುಪಡಿಸಿ ತನ್ನ ಅಭಿಪ್ರಾಯವನ್ನು ಕೋರಿದ್ದರು. ತಾನು ತನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿಯವರು ಹಾಜರುಪಡಿಸಿದ್ದ ರೇಜರ್ ನಂತಹ ವಸ್ತುಗಳಿಂದ ಹೊಡೆದರೆ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ತಿಳಿಸಿದ್ದೆ. ತನಿಖಾಧಿಕಾರಿಯವರು ತನ್ನ ಮುಂದೆ ಹಾಜರುಪಡಿಸಿದ್ದ ರೇಜರ್ ಈಗ ತಾನು ನೋಡುತ್ತಿರುವ ರೇಜರ್ ನಂತೆಯೇ ಇತ್ತು. ಸಾಕ್ಷಿದಾರರು ತನ್ನ ಅಭಿಪ್ರಾಯದ ವರದಿ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ–*12* ಮತ್ತು ನಿ.ಪಿ–*12(*ಎ*)* ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**7)** ಪ್ರಾಸಾ–**13** ಡಾ. ಲಕ್ಷಿತ್ ಬಿಡ್ಡಪ್ಪ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ತಾನು ಗಾಯಾಳುವಿಗೆ ಸಂಬಂಧಪಟ್ಟಂತೆ ಕೇಸ್ ಶೀಟ್ ಅನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿದಾರರು ಕೇಸ್ ಶೀಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–13 ಅಂತ ಗುರುತಿಸಲಾಯಿತು. ಎಂ.ಓ–1 ರಿಂದ ಹಲ್ಲೆ ಮಾಡಿದರೆ ನಿಪಿ–11 ರಲ್ಲಿ ಹೇಳಿರುವಂತಹ

ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ನಿಪಿ–11 ರಲ್ಲಿ 3 ಗಾಯಗಳನ್ನು ತೋರಿಸಿದ್ದು ನಿಪಿ–13 ರಲ್ಲಿ ಒಟ್ಟು 5 ಗಾಯಗಳನ್ನು ತೋರಿಸಿದ್ದು ನಿಪಿ–13 ರಲ್ಲಿ ಇರುವ 1 ಮತ್ತು 2 ರಲ್ಲಿ ಹೇಳಿರುವಂತಹ ಗಾಯ ನಿಪಿ–11 ರಲ್ಲಿನ 3 ನೇ ಗಾಯಕ್ಕೆ 2 ಗಾಯಗಳು ಸೇರುತ್ತವೆ. ನಿಪಿ–13 ರ 5 ನೇ ಗಾಯ ನಿಪಿ–11 ರಲ್ಲಿನ 2 ನೇ ಗಾಯಕ್ಕೆ ಸೇರುತ್ತದೆ. ಗಾಯಾಳುವಿನ ಕೆಳ ತುಟಿಯಲ್ಲಿ facial nerve injury ಆಗಿತ್ತು ಆದ್ದರಿಂದ ಗಾಯಾಳುವಿನ ತುಟಿಗೆ paralysis ಆಗಿದ್ದರಿಂದ ಗಾಯದ ಪ್ರಮಾಣ ಪತ್ರದಲ್ಲಿ 3 ನೇ ಗಾಯದ ಆಧಾರದ ಮೇಲೆ ತೀವ್ರ ಸ್ವರೂಪದ ಗಾಯ ಎಂದು ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**8)** ಫ್ರಾಸಾ–**14** ಶ್ರೀಧರ ಎಸ್. ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ನಾನು *2021* ರಿಂದ *2022* ರವರೆಗೆ ಚಾಮುಂಡಿಪುರಂ ಸಬ್ ಡಿವಿಶನ್ ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು. ಪೊಲೀಸ್ ಇನ್ಸ್ ಪೆಕ್ಟರ್ ಕೃಷ್ಣ ರಾಜ ಪೊಲೀಸ್ ಠಾಣೆಯವರು ಅವರ ಠಾಣಾ ಮೊ.ಸಂಖ್ಯೆ *97/2020* ಪ್ರಕರಣದಲ್ಲಿ ಕೆ.ಆರ್. ಮೊಹಲ್ಲಾದ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗದ ಎಂ.ಜಿ ರಸ್ತೆಯಲ್ಲಿ ದಿನಾಂಕ *04.09.2020* ರಂದು ರಾತ್ರಿ *10.00* ಗಂಟೆಯಿಂದ ಮಧ್ಯ ರಾತ್ರಿ *2.00* ಗಂಟೆಯವರೆಗೆ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಮಾಹಿತಿ ಕೋರಿದ್ದು ತಾನು ಸ್ಥಳ ದಲ್ಲಿ *66/11* ***KVMUSS*** ನಿಂದ ಹೊರಹೊಮ್ಮುವ ಅಗ್ರಹಾರ ಫೀಡರ್ ನ ಗಿರೀಶ್ ಪರಿವರ್ತಕದ ಸಂಖ್ಯೆ *(114* ***A*** *28 ) 250* ***KVA*** ಇಂದ ವಿದ್ಯುತ್ ಸರಬರಾಜು ಗೊಂಡಿದ್ದು ನಿರಂತರ ವಿದ್ಯುತ್ ಸರಬರಾಜು ಗೊಂಡಿರುತ್ತದೆ ಎಂದು ಹೇಳಿ ಮಾಹಿತಿ ಕೊಟ್ಟಿದ್ದೆ. ಆ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಸದರಿ ದಾಖಲೆಯನ್ನು ಮತ್ತು

ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. *14* ಮತ್ತು ನಿಪಿ–*14(ಎ)* ಎಂದು ಗುರುತಿಸಲಾಯಿತು. ತಾನು ಲಾಗ್ ಬುಕ್ ಆಧಾರದ ಮೇಲೆ ಮತ್ತು ಗಿರೀಶ್ ರವರು ಕೊಟ್ಟಂತಹ ವರದಿ ಆಧಾರದ ಮೇಲೆ ನಿಪಿ–*14* ಅನ್ನು ಕೊಟ್ಟಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

9) ಫ್ರಾಸಾ–15 ಡಾ. ರಾಧ ಎಸ್. ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ತಾನು *2011* ನವೆಂಬರ್ ನಿಂದ ಇಲ್ಲಿಯವರೆಗೂ ಆರ್ ಎಫ್ ಎಸ್ ಎಲ್ ಮೈಸೂರ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ *04.11.2020* ರಂದು ಕೃಷ್ಣರಾಜು ಪೊಲೀಸ್ ಠಾಣೆಯ ಮುಖ್ಯ ಪೇದೆ *652* ಮಂಜುನಾಥ ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ *97/2020* ಕ್ಕೆ ಸಂಬಂಧಿಸಿದಂತೆ *4* ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ತಮ್ಮ ಕಚೇರಿಗೆ ತಂದಿದ್ದರು. ತಮ್ಮ ಸ್ವಾಗತ ವಿಭಾಗದವರು ಆ ವಸ್ತುಗಳನ್ನು ಸ್ವೀಕರಿಸಿ ಅವುಗಳಿಗೆ ಕಚೇರಿಗೆ ಸಂಖ್ಯೆ ಆರ್ ಎಫ್ ಎಸ್ ಎಲ್/ಬಿ ಎಸ್ *748/2020* ಎಂದು ನೀಡಿ ತಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ತಾನು ಸದರಿ ವಸ್ತುಗಳನ್ನು ಸ್ವೀಕರಿಸಿ ಅವುಗಳನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡು ನೋಡಲಾಗಿ ಅವುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಸೀಲಿಗೆ ಮತ್ತು ವಿವರಣೆಗಳಿಗೆ ಹೋಲಿಕೆ ಆಗುತ್ತಿತ್ತು. ತಾನು ಸದರಿ ವಸ್ತುಗಳನ್ನು ತೆಗೆದು ನೋಡಲಾಗಿ ಅವುಗಳು ಈ ಕಳಕಂಡತೆ ಇದ್ದವು.

*1)* ಡಾಂಬರ್ ಪೀಸುಗಳು

2) ಮಾದರಿ ಡಾಂಬರ್ ಪೀಸುಗಳು

3) ಒಂದು ಟೀ ಶರ್ಟ್

4) ಒಂದು ರೇಜರ್

ತಾನು ಸದರಿ ವಸ್ತುಗಳನ್ನು ರಸಾಯನಿಕ ಮತ್ತು ಸಿರಾಲಾಜಿ ಪರೀಕ್ಷೆಗ ಒಳಪಡಿಸಿದ್ದೆನು. ತನ್ನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ 1, 3 ಮತ್ತು 4 ರಲ್ಲಿ ರಕ್ತದ ಕಲೆಗಳು ಕಂಡು ಬಂದಿದದ್ದವು. ವಸ್ತು ಸಂಖ್ಯೆ 1 ಮತ್ತು 3 ರಲ್ಲಿ ಇದ್ದ ರಕ್ತದ ಕಲೆಗಳು ಮನುಷ್ಯನ ಬಿ ಗುಂಪಿಗೆ ಸೇರಿದ ರಕ್ತದ ಕಲೆಯಾಗಿತ್ತು. ವಸ್ತು ಸಂಖ್ಯೆ 4 ರಲ್ಲಿ ಇದ್ದಂತಹ ರಕ್ತದ ಕಲೆಗಳು ಅತ್ಯಲ್ಪ ಪ್ರಮಾಣದಲಿದ್ದು ಸಿರಾಲಜಿ ಪರೀಕ್ಷೆಗೆ ಸಾಕಾಗಿರುವುದಿಲ್ಲ. ಆದ್ದರಿಂದ ಅವುಗಳ ಮೂಲ ಮತ್ತು ಗುಂಪನ್ನು ಕಂಡುಹಿಡಿಯಲು ಆಗಿರುವುದಿಲ್ಲ. ಅದರಂತೆ ತನ್ನ ಅಭಿಪ್ರಾಯ ವರದಿಯನ್ನು ತಮ್ಮ ಉಪ ನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿದ್ದೆನು. ಪರೀಕ್ಷೆಯಾದ ನಂತರ ವಸ್ತು ಸಂಖ್ಯೆ 1 ರಿಂದ 4 ನ್ನು ಮರು ಪ್ಯಾಕ್ ಮಾಡಿ ತಮ್ಮ ಕಚೇರಿಯ ಅರಗು ಸೀಲ್ ನೊಂದಿಗೆ ಮೊಹರು ಮಾಡಿ ಸಂಬಂಧಿಸಿದ ಪೋಲಿಸರಿಗೆ ವಾಪಾಸ್ ನೀಡಿರುತ್ತೇನೆ. ತಾನು ಪರೀಕ್ಷೆ ಮಾಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ತಾನು ನನ್ನ ವರದಿಯೊಂದಿಗೆ ಮಾದರಿ ಸೀಲನ್ನು ಲಗತ್ತಿಸಿದ್ದೆನು. ಸಾಕ್ಷಿದಾರರು ವರದಿಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.15 ಮತ್ತು ನಿಪಿ–15 (ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಾದರಿ ಸೀಲನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–16 ಮತ್ತು ನಿಪಿ–16(ಎ) ಎಂದು ಗುರುತಿಸಲಾಯಿತು. ತಾನು ಆ ದಿನ ಪರೀಕ್ಷೆಗೆ ಒಳಪಡಿಸಿದ ವಸ್ತುಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿದಾರರು ಎಂ.ಒ–1 ರಿಂದ 4 ವಸ್ತುಗಳನ್ನು ನೋಡಿ ಗುರುತಿಸಿರತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

10) ಫ್ರಾಸಾ–16 ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ತಾನು ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ದಿನಾಂಕ *17.07.2019* ರಿಂದ *12.02.2021* ರವರೆಗೆ ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು. ದಿನಾಂಕ 05.10.2020 ರಂದು ಸಂಜೆ 7.00 ಗಂಟೆ ಸಮಯದಲ್ಲಿ ತಾನು ಠಾಣೆಯ ಪ್ರಭಾರದಲ್ಲಿ ಇದ್ದಾಗ ಈ ಕೇಸಿನ ಪಿರ್ಯಾದಿ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 97/2020 ಕಲಂ 341, 323, 307 ಸಹಕಲಂ 34 ಐಪಿಸಿ ರೀತ್ಯ ಮೊಕದ್ದಮೆ ದಾಖಲಿಸಿ ಕೊಂಡು ಪ್ರ.ವ.ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ನಿಪಿ–1 ದೂರನ್ನು ಮತ್ತು ಸಹಿಯನ್ನು ನೊಡೀ ಗುರುತಿಸಿದ್ದು ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವರದಿಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.17 ಮತ್ತು ನಿಪಿ.17(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

11) ಫ್ರಾಸಾ–16 ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ 06.10.2020 ರಂದು ಕೃತ್ಯ ನಡೆದ ಸ್ಥಳ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗ ಎಂ.ಜಿ ರಸ್ತೆಗೆ

ತಾನು ಮತ್ತು ಸಿಬ್ಬಂದಿಯವರು ಕೃತ್ಯ ನಡೆದ ಸ್ಥಳದ ಮಹಜರ್ ಮಾಡಲು ಹೋಗಿದ್ದೆವು. ಕೃತ್ಯ ನಡೆದ ಸ್ಥಳ ದಲ್ಲಿ ಪಿರ್ಯಾದುದಾರರಾದ ನವೀನ್ ಕುಮಾರ್ ಚಾಸಾ–1 ರವರು ಹಾಜರಿದ್ದು ಕೃತ್ಯ ನಡೆದ ಸ್ಥಳ ಇದೇ ಎಂದು ತೋರಿಸಿದ್ದು ಆ ಸ್ಥಳ ದಲ್ಲಿ ಪಂಚಾಯಿತಿದಾರರಾದ ಮಂಜು ಮತ್ತು ಲಕ್ಷ್ಮಿ ನರಸಿಂಹರಾಜ್ ರವರನ್ನು ಪಂಚಾಯಿತಿದಾರರಾಗಿ ನೇಮಕ ಮಾಡಿಕೊಂಡು ಕೇಸಿನ ಬಗ್ಗೆ ವಿಚಾರವನ್ನು ತಿಳಿಸಿದ್ದೆನು. ಸದರಿಯವರು ಪಂಚರಾಗಲು ಒಪ್ಪಿದ್ದು ಪಂಚಾಯಿತಿದಾರರ ಸಮಕ್ಷಮ ಮಹಜರ್ ಕ್ರಮವನ್ನು ಕೈಗೊಂಡಿದ್ದೆನು. ಕೃತ್ಯ ನಡೆದ ಸ್ಥಳ ದಲ್ಲಿ ರಕ್ತದ ಕಲೆಯಾಗಿರುವ ರಸ್ತೆಯ ಡಾಂಬರ್ ಚೂರುಗಳು ಮತ್ತು ಸಾಧಾ ಡಾಂಬರ್ ಚೂರುಗಳು ಹಾಗೂ ಪಿರ್ಯಾದಿಯವರು ಕೃತ್ಯ ನಡೆದ ಸಂದರ್ಭದಲ್ಲಿ ಧರಿಸಿದ್ದ ಒಂದು ನೀಲಿ ಬಣ್ಣದ ಟೀ ಶರ್ಟ್ ಅನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಲಾಗಿ ಅದು ಅರ್ಧ ತೋಳಿನ ಟೀ ಶರ್ಟ್ ಆಗಿದ್ದು ರಕ್ತದ ಕಲೆಯಾಗಿತ್ತು. ಈ ಮೇಲ್ಕಂಡ ವಸ್ತುಗಳನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಬಿಳಿಯ ಬಟ್ಟೆಯ ಕೈ ಚೀಲದಲ್ಲಿ ಹಾಕಿ ಹೊಲೆದು ವಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿದ್ದೆನು. ಮಹಜರ್ ಅನ್ನು ಬೆಳಗ್ಗೆ *10.30* ಗಂಟೆಯಿಂದ *11.15* ಗಂಟೆಯವರೆಗೆ ಬರೆದಿದ್ದೆ. ಸದರಿ ಮಾಲನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ *96/2020* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆ. ಸಾಕ್ಷಿದಾರರು ನಿಪಿ–*2* ಸ್ಥಳ ಪಂಚನಾಮೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ.2 (ಡಿ) ಎಂದು ಗುರುತಿಸಲಾಯಿತು. ತಾನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಎಂ.ಒ–*2* ರಿಂದ *4* ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರಾದ ಎಂ.ಬಿ. ಪವನ್

ಕುಮಾರ್ ಮತ್ತು ಎಸ್. ರಮೇಶ್ ಹಾಗೂ ಪಂಚಾಯಿತಿದಾರರಾದ ಮಂಜು ಹಾಗೂ ಲಕ್ಷ್ಮಿ ನರಸಿಂಹರಾಜು ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು. ಫ್ರಾಸಾ-*8* ಮತ್ತು *9* ರವರು ನನ್ನ ಮುಂದೆ ನಿಪಿ- *7* ಮತ್ತು *8* ರಂತೆ ಹೇಳಿಕೆಯನ್ನು ಕೊಟ್ಟಿದ್ದರು. ಸಾಕ್ಷಿ ನುಡಿದ ಬಗ್ಗೆ ಮುಚ್ಚಳಿಕೆಯನ್ನು ಬರೆಸಿಕೊಂಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**12)** ಫ್ರಾಸಾ-**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ *07.10.2020* ರಂದು ಈ ಕೇಸಿನ ಪ್ರತ್ಯಕ್ಷ ಸಾಕ್ಷಿ ವಿಜಯ ಬಿನ್ ಲೇಟ್ ಗೋಪಿ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸದರಿಯವರು ತನ್ನ ಮುಂದೆ ನಿಪಿ-*6* ರ ಪ್ರಕಾರ ಹೇಳಿಕೆ ಕೊಟ್ಟಿದ್ದರು. ದಿನಾಂಕ *09.10.2020* ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡಲು ವಲಯ ಆಯುಕ್ತಕರು, ವಲಯ ಕಛೇರಿ *-1* ಮೈಸೂರು ಮಹಾ ನಗರ ಪಾಲಿಕೆಗೆ ಮತ್ತು ಕೃತ್ಯ ನಡೆದ ದಿನ ಸ್ಥಳ ದಲ್ಲಿ ವಿಧ್ಯುತ್ ಸಂಪರ್ಕ ಇರುವಿಕೆಯ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯಪಾಲಕ ಅಭಿಯಂತರರು ಚಾಮುಂಡೇಶ್ವರಿ ವಿಧ್ಯುತ್ ಸರಬರಾಜು ನಿಗಮ ಚಾಮುಂಡಿಪುರಂ ಮೈಸೂರು ರವರಿಗೆ ಮನವಿ ಪತ್ರವನ್ನು ಸಲ್ಲಿಸಿದ್ದೆನು. ದಿನಾಂಕ *11.10.2020* ರಂದು ಪಿರ್ಯಾದಿ ನವೀನ್ ಕುಮಾರ್ ರವರು ಚಿಕಿತ್ಸೆ ಪಡೆದಿರುವ ಬಾನವಿ ಆಸ್ಪತ್ರೆ ಕುವೆಂಪುನಗರ ವೈದ್ಯಾಧಿಕಾರಿಯವರಿಗೆ ಗಾಯದ ಪ್ರಮಾಣ ಪತ್ರವನ್ನು ಕೊಡುವಂತೆ ಮನವಿ ಪತ್ರವನ್ನು ನಿವೇದಿಸಿಕೊಂಡಿದ್ದೆನು. ದಿನಾಂಕ *21.10.2020* ರಂದು *1* ನೇ ಆರೋಪಿ ಅಂಬರೀಶ್ ಈತ ಚಾಮುಂಡಿ ಬೆಟ್ಟದ ಪಾದದ ಬಳಿ ಇರುವುದಾಗಿ ಬಾತ್ಮಿದಾರರಿಂದ ಖಚಿತ ಬಾತ್ಮಿ ಬಂದ ಮೇರೆಗೆ ತಾನು, ಹೆಚ್.ಸಿ *412,* ಪಿಸಿ *850* ಶರತ್ ಕುಮಾರ್

ರವರೊಂದಿಗೆ ಹೋಗಿ ಆರೋಪಿ ಅಂಬರೀಶ್ ನನ್ನು ಮಧ್ಯಾಹ್ನ *12.30* ಗಂಟೆ ಸಮಯದಲ್ಲಿ ವಶಕ್ಕೆ ಪಡೆದುಕೊಂಡು ಮಧ್ಯಾಹ್ನ *1.00* ಗಂಟೆಗೆ ಠಾಣೆಗೆ ಕರೆದುಕೊಂಡು ಬಂದಿದ್ದೆನು. ಠಾಣೆಯಲ್ಲಿ ಆರೋಪಿತನನ್ನು ವಿಚಾರಣೆ ಮಾಡಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಮಧ್ಯಾಹ್ನ *1.30* ಗಂಟೆಗೆ ಆರೋಪಿತನನ್ನು ದಸ್ತಗಿರಿ ಮಾಡಿಕೊಂಡು ದಸ್ತಗಿರಿ ಕ್ರಮ ಅನುಸರಿಸಿಕೊಂಡಿದ್ದೆನು. ಆರೋಪಿಯ ಬೆಂಗಾವಲಿಗಾಗಿ ಪಿಸಿ *850* ಶರತ್ ಕುಮಾರ್ ನನ್ನು ನೇಮಿಸಿದ್ದೆನು. ಆರೋಪಿತನ ಅಂಗಶೋಧನೆ ಮಾಡುವ ಸಂದರ್ಭದಲ್ಲಿ ಆತನ ಪ್ಯಾಂಟಿನ ಜೇಬಿನಲ್ಲಿ ಒಂದು ರೇಜರ್ ಪತ್ತೆಯಾಗಿದ್ದು ಈ ಬಗ್ಗೆ ವಿಚಾರಣೆ ಮಾಡಲಾಗಿ ಇದೇ ರೇಜರ್ ನಿಂದ ಪಿರ್ಯಾದಿ ನವೀನ್ ಕುಮಾರ್ ರವರಿಗೆ ಗಾಯಗೊಳಿಸಿದ್ದು ಎಂದು ಆರೋಪಿ ಒಪ್ಪಿಕೊಂಡಿದ್ದೆನು. ಸದರಿ ರೇಜರ್ ಅನ್ನು ಪೊಲೀಸ್ ಠಾಣೆಯಲ್ಲಿ ಪಂಚಾಯಿತಿದಾರರಾದ ಗುರುರಾಜ್ ಮತ್ತು ಪ್ರವೀಣ್ ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು ಸದರಿ ರೇಜರ್ ಅನ್ನು ಪರೀಕ್ಷಿಸಲಾಗಿ ರೇಜರ್ ಓಪನ್ ಮಾಡಿದಾಗ *24* ಇಂಚು ಉದ್ದ ಪ್ಲಾಸ್ಟಿಕ್ ಹಿಡಿಯ ಭಾಗ *12* ಇಂಚು ಉದ್ದ ಇರುತ್ತದೆ. ಅದನ್ನು ಪ್ರತ್ಯೇಕವಾಗಿ ಒಂದು ಕೈ ಚೀಲದಲ್ಲಿ ಹಾಕಿ ಹೊಲೆದು ಪಂಚಾಯಿತಿದಾರರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೆನು. ಸದರಿ ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ನ *2.00* ಗಂಟೆಯಿಂದ *2.45* ಗಂಟೆಯವರೆಗೆ ಬರೆಯಲಾಗಿತ್ತು. ಸಾಕ್ಷಿದಾರರು ನಿಪಿ-*9* ಅಮಾನತ್ತು ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ.*9 (ಸಿ)* ಎಂದು ಗುರುತಿಸಲಾಯಿತು. ತಾನು ರೇಜರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಎಂ.ಒ-*1* ರೇಜರ್ ಅನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರೇಜರ್ ಅನ್ನು ಮಾಲು ಪಟ್ಟಿ

ಸಂಖ್ಯೆ *102/2020* ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಮಧ್ಯಾಹ್ನ *3.00* ಗಂಟೆ ಸಮಯಕ್ಕೆ ನಾನು ಪಿರ್ಯಾದಿಯವರಿಗೆ ಫೋನ್ ಮಾಡಿ ಠಾಣೆಗೆ ಬರುವಂತೆ ತಿಳಿಸಿದ್ದೆನು. ಪಿರ್ಯಾದುದಾರರು ಠಾಣೆಗೆ ಹಾಜರಾಗಿ ಆರೋಪಿ ಮತ್ತು ಕೃತ್ಯಕ್ಕೆ ಬಳಸಿದ್ದ ರೇಜರ್ ಅನ್ನು ನೋಡಿ ಗುರುತಿಸಿದ್ದರು. ಈ ಬಗ್ಗೆ ಪಿರ್ಯಾದಿದಾರರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದು ರಿಮ್ಯಾಂಡ್ ಅರ್ಜಿಯೊಂದಿಗೆ ನಮ್ಮ ಸಿಬ್ಬಂದಿಯವರಾದ ಪಿಸಿ *196* ಮತ್ತು ಪಿಸಿ *850* ಇವರ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ನಾನು *1* ನೇ ಆರೋಪಿ ಅಂಬರೀಶ್ ನನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಅಂಬರೀಶ್ ರವರನ್ನು ನೋಡಿ ಗುರುತಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**13)** ಫ್ರಾಸಾ-**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ *24.10.2020* ರಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದವರು ಕೃತ್ಯ ನಡೆದ ಸ್ಥಳ ದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದೃಡೀಕರಣ ಪತ್ರವನ್ನು ನೀಡಿದ್ದರು ಅದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ನಿಪಿ-*14* ದೃಡೀಕರಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. *14(ಬಿ)* ಎಂದು ಗುರುತಿಸಲಾಯಿತು. ದಿನಾಂಕ *31.10.2020* ರಂದು ಗಾಯಾಳು ನವೀನ್ ಕುಮಾರ್ ರವರ ಗಾಯದ ಪ್ರಮಾಣ ಪತ್ರವನ್ನು ಬಾನವಿ ಆಸ್ಪತ್ರೆಯಿಂದ ಠಾಣೆಯ ಸಿಬ್ಬಂದಿ ಪಿಸಿ *23* ಮಂಜುನಾಥ್ ರವರು ತೆಗೆದುಕೊಂಡು ಬಂದು ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು.

ಸಾಕ್ಷಿದಾರರು ನಿಪಿ-*11* ಗಾಯದ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.*11* *(ಬಿ)* ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

14) ಫ್ರಾಸಾ-**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ *31.10.2020* ರಂದು ಮಾಲು ಪಟ್ಟಿ ಸಂಖ್ಯೆ *96/2020* ಮಾಲು ಪಟ್ಟಿ ಸಂಖ್ಯೆ *102/2020* ಮಾಲುಗಳನ್ನು ಉಪನಿರ್ದೇಶಕರು*,* ಪ್ರದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ ಮೈಸೂರು ರವರಿಗೆ ಪಿಸಿ *23* ಮಂಜುನಾಥ್ ರವರ ಮುಖಾಂತರ ಪಾಸ್ ಪೋರ್ಟ್ ನೊಂದಿಗೆ ಕಳುಹಿಸಿಕೊಟ್ಟಿದ್ದೆನು*.* ಸಾಕ್ಷಿದಾರರು ಪಾಸ್ ಪೋರ್ಟ್ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-*18* ಮತ್ತು ನಿಪಿ-*18(ಎ)* ಎಂದು ಗುರುತಿಸಲಾಯಿತು*.* ದಿನಾಂಕ *04.11.2020* ರಂದು *RFSL* ನಿಂದ ಸ್ವೀಕೃತಿ ಪಡೆದ ಬಗ್ಗೆ ಪಿಸಿ ಮಂಜುನಾಥ್ ರವರು ದಾಖಲೆ ತಂದು ಹಾಜರುಪಡಿಸಿದ್ದರು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದೆನು*.* ದಿನಾಂಕ *05.11.2020* ರಂದು ಈ ಕೇಸಿನ ಸಾಕ್ಷಿದಾರರಾದ ಎಂ.ಎಸ್*.* ರಾಜ್ ಕುಮಾರ್*,* ವಿಜಯಶಂಕರ್*,* ಕುಶಾಲ್ ಕಶ್ಯಪ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು*.* ಫ್ರಾಸಾ-*4* ರಿಂದ *6* ರವರು ನನ್ನ ಮುಂದೆ ನಿಪಿ-*3* ರಿಂದ *5* ರ ಪ್ರಕಾರ ಹೇಳಿಕೆಗಳನ್ನು ಕೊಟ್ಟಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

15) ಫ್ರಾಸಾ-**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ *07.11.2020* ರಂದು ವಲಯ ಆಯುಕ್ತಕರು ವಲಯ ಕಛೇರಿ-*1* ರವರು ಕೃತ್ಯ ನಡೆದ

ಸ್ಥಳದ ನಕಾಶೆ ತಯಾರಿಸಿ ನಕ್ಷೆ ಯ ಪ್ರತಿಯನ್ನು ಪಿಸಿ *23* ಮಂಜುನಾಥ್ ರವರ ಮುಖಾಂತರ ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಕವರಿಂಗ್ ಲೆಟರ್, ನಕ್ಷೆ ಮತ್ತು ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-*19* , *20* ಮತ್ತು ನಿಪಿ-*19(ಎ)* ಎಂದು ಗುರುತಿಸಲಾಯಿತು. ದಿನಾಂಕ *08.11.2020* ರಂದು ಗುರುಸ್ವಾಮಿ ಬ್ರೇಜ ಕಾರಿನ ಮಾಲೀಕರು ಇದ್ದು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸದರಿಯವರು ತನ್ನ ಮುಂದೆ ನಿಪಿ-*10* ರಂತೆ ಹೇಳಿಕೆಯನ್ನು ಕೊಟ್ಟಿದ್ದರು. ದಿನಾಂಕ *10.11.2020* ರಂದು ಈ ಕೇಸಿನ *2* ನೇ ಆರೋಪಿ ಸುರೇಶ್ ಸ್ವಾಮಿ ಇವರು ಮೈಸೂರಿನ ಜಿಲ್ಲಾ ಸತ್ರ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನನ್ನು ಪಡೆದುಕೊಂಡು ಬಂದು ಹಾಜರಾದ ಮೇಲೆ ಆದೇಶದ ದೃಡೀಕೃತ ಪ್ರತಿಯನ್ನು ಪಡೆದುಕೊಂಡಿದ್ದೆನು. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ನ್ಯಾಯಾಲಯದ ಆದೇಶದಂತೆ ಮಂಜು ಮತ್ತು ಪುಟ್ಟಣ ರವರ ಜಾಮೀನನ್ನು ಪಡೆದುಕೊಂಡು ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**16)** ಪ್ರಾಸಾ–**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ದಿನಾಂಕ *23.11.2020* ರಂದು ಬಾನವಿ ಆಸ್ಪತ್ರೆಯಿಂದ *accidental extract register* ಅನ್ನು ಪಿರ್ಯಾದಿ ನವೀನ್ ಕುಮಾರ್ ರವರು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*21* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*21(ಎ)* ಎಂದು ಗುರುತಿಸಲಾಯಿತು.

ದಿನಾಂಕ *24.11.2020* ರಂದು *RFSL* ನಿಂದ ರಕ್ತದ ಕಲೆಯಾಗಿರುವ ಡಾಂಬರ್ ಚೂರುಗಳು, ಸಾಧಾ ಡಾಂಬರ್ ಚೂರುಗಳು ಮತ್ತು ನೀಲಿ ಬಣ್ಣದ ಅರ್ಧ ತೋಳಿನ ಟೀಶರ್ಟ್ ಮತ್ತು ರೇಜರ್ ಇವುಗಳನ್ನು ಠಾಣಾ ಸಿಬ್ಬಂದಿ ಮಂಜುನಾಥ್ ರವರು ವಾಪಸ್ಸು ತಂದು ಹಾಜರುಪಡಿಸಿದ್ದರು. ದಿನಾಂಕ *25.11.2020* ರಂದು ಆರೋಪಿಯಿಂದ ಅಮಾನತ್ತು ಪಡಿಸಿಕೊಂಡಿದ್ದ ಕೃತ್ಯಕ್ಕೆ ಉಪಯೋಗಿಸಿದ್ದ ರೇಜರ್ ಅನ್ನು ಫ್ರಾಸಾ-*1* ನವೀನ್ ಕುಮಾರ್ ರವರಿಗೆ ಆಗಿರುವ ಗಾಯವು ಈ ರೇಜರ್ ನಿಂದ ಆಗಿದೆಯೇ ಅಂತ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ವೈದ್ಯಾಧಿಕಾರಿಗಳು ಬಾನವಿ ಆಸ್ಪತ್ರೆಗೆ ಮನವಿ ಪತ್ರದೊಂದಿಗೆ ನಿವೇದಿಸಿಕೊಂಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**17)** ಫ್ರಾಸಾ–**16** ಶ್ರೀನಿವಾಸ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಅದೇ ದಿನ ಪಿಸಿ *23* ಮಂಜುನಾಥ್ ರವರು *FSL* ರಿಪೋರ್ಟ್ ಹಾಗೂ ಸ್ಯಾಂಪಲ್ ಸೀಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ನಿಪಿ-*15 FSL* ರಿಪೋರ್ಟ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.*15(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ಯಾಂಪಲ್ ಸೀಲು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*16* ಎಂದು ಗುರುತಿಸಲ್ಪಟ್ಟಿರುತ್ತದೆ. ದಿನಾಂಕ *26.11.2020* ರಂದು ಬಾನವಿ ಆಸ್ಪತ್ರೆ ಯ ವೈಧಾಧಿಕಾರಿಯವರು ನವೀನ್ ಕುಮಾರ್ ಗೆ ಆಗಿರುವ ಗಾಯ *sharp knife or razor* ನಿಂದ ಆಗಿರಬಹುದು ಎಂದು ತಮ್ಮ ಅಭಿಪ್ರಾಯದ ವರದಿಯನ್ನು ನೀಡಿದ್ದರು. ಸಾಕ್ಷಿದಾರರು ನಿಪಿ-*12* ಅಭಿಪ್ರಾಯದ

ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.*12(ಬಿ)* ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದು ದಿನಾಂಕ *26.11.2020* ರಂದು ಆರೋಪಿತರದ *1* ನೇ ಆರೋಪಿ ಅಂಬರೀಶ್ ಮತ್ತು *2* ನೇ ಆರೋಪಿ ಸುರೇಶ್ ಸ್ವಾಮಿ ರವರ ವಿರುದ್ಧ ಕಲಂ *341, 323, 307* ಸಹ ಕಲಂ *34* ಐಪಿಸಿ ರೀತ್ಯ ದೋಷಾರೋಪಣಾ ಪತ್ರವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**18)** ಫ್ರಾಸಾ–**17** ಸುಶೃತ್ ಇವರು ತನ್ನ ಸಾಕ್ಷಿ ವಿಚಾರಣೆಯಲ್ಲಿ ನಾನು 2020 ನೇ ಇಸವಿ ಜುಲೈ ತಿಂಗಳಿನಿಂದ ಮೈಸೂರು ಸಿಟಿ ಕಾರ್ಪೋರೇಶನ್ ನಲ್ಲಿ Assistant Executive engineer ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 07.11.2020 ರಂದು ಕೆ.ಆರ್. ಪೊಲೀಸ್ ಠಾಣೆಯ ಮೊ.ಸಂಖ್ಯೆ 97/2020 ಪ್ರಕರಣದಲ್ಲಿನ ಘಟನಾ ಸ್ಥಳ ಜೆ.ಎಸ್.ಎಸ್. ಆಸ್ಪತ್ರೆಯ ಮುಖ್ಯ ದ್ವಾರದ ಮುಂಭಾಗದ ಸ್ಥಳ ದ ನಕಾಶೆಯನ್ನು ತಯಾರಿಸಿಕೊಡುವಂತೆ ಮನವಿ ಮಾಡಿಕೊಂಡಿದ್ದು ತಾನು ಅದೇ ದಿನಾಂಕ ಘಟನಾ ಸ್ಥಳ ಕ್ಕೆ ಭೇಟಿ ಕೊಟ್ಟು ಕೆ.ಆರ್. ಪೊಲೀಸ್ ಠಾಣೆಯ ಸಿಬ್ಬಂದಿ ತೋರಿಸಿದ್ದ ಸ್ಥಳ ದಲ್ಲಿ ನಕಾಶೆಯನ್ನು ತಯಾರು ಮಾಡಿದ್ದೆನು. ತನ್ನ ಜೊತೆಯಲ್ಲಿ ಜುನೀಯರ್ ಇಂಜಿನಿಯರ್ ಇದ್ದರು. ತಾನು ಆ ದಿನ ತಯಾರು ಮಾಡಿದ್ದ ನಕಾಶೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಕಾಶೆಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–20 ಮತ್ತು ನಿಪಿ–20(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

19) ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ ?

ಉತ್ತರ – ಆ )

20) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರೋ ಹೇಗೆ ?

ಉತ್ತರ – ಆ )

(**ಸಾಕ್ಷಿದಾರರ ಸಾಕ್ಷ್ಯವನ್ನು ಆರೋಪಿಗಳಿಗೆ ಓದಿ ತಿಳಿಸಿ ಹೇಳಿದ್ದು, ಆರೋಪಿಗಳು ಸ್ವತಃ ಹೇಳಿಕೆ ನೀಡಿದ ರೀತಿಯಲ್ಲಿಯೇ ಅವರ ಉತ್ತರಗಳನ್ನು ಈ ದಿನ ಅಂದರೆ ದಿನಾಂಕ 11.06.2026 ರಂದು ಪಡೆದುಕೊಳ್ಳಲಾಗಿದೆ.**)

(**ಅನಂತ ಹೆಚ್.** )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಮೈಸೂರು.